Sripati Nellitaya

ಗುಡುಗು

ಇಲ್ಲಿಗೆ ಅಷ್ಟೇ ಸಾಕೋ ಏನೋ? ಅಮೃತವನ್ನು ಜಗನ್ಮೋಹಿನಿ ಕೊನೆಗೆ ಚೆಲ್ಲಿದ್ದು ವ್ಯಾವಹಾರಿಕವಾಗಿ ದ್ರವ್ಯನಷ್ಟವಲ್ಲವೇ? ಮತ್ತೊಮ್ಮೆ ಬಡಿಸಬಹುದಿತ್ತಲ್ಲ? ಅದು ಹಾಗಲ್ಲ– ಬೇರೇನಾದರೂ ಬದಲು ದಾರಿ ನೋಡಬಹುದಿತ್ತಲ್ಲ? ಹಾಗಲ್ಲ, ಸರ್ವತಂತ್ರ ಸ್ವತಂತ್ರನನ್ನು ಯಾರೂ ಕೇಳುವವರಿಲ್ಲ. ಅದು ಅವನ ಇಚ್ಛೆ. ಅವ ಕೊಟ್ಟದ್ದನ್ನು ನಾವು ಕೊಳ್ಳಬೇಕು.ಭೀಷ್ಮಾಚಾರ್ಯರಿಗೆ ಆಯುಧಗಳೇ ಅನುಗ್ರಹವಾಗಿ ಕೊನೆಗೆ ಬಂದಂತೆ. ಪೂಜ್ಯ ಅಜ್ಜನವರು ಜೀವಂತ ಸಮಾಧಿಯ ಬದಲು ಹಾಸಿಗೆ ಹಿಡಿದು ಸಾಮಾನ್ಯರಂತೆ ದೇಹತ್ಯಾಗ ಮಾಡಿದರಲ್ಲ! ಅದು ಹಾಗೆಯೇ. ಅಲ್ಲಿಗೆ ಮುಗಿಯಿತು. ಧರಿಸುವ ಹೃದಯ ಇಲ್ಲದ ಸ್ಥಿತಿಯಲ್ಲಿ ಮತ್ತೆ ಅದೇ ಸ್ಥಿತಿ.

ಅದಕ್ಕಾಗಿ ಸಹಸ್ರನಾಮಗಳ ಪೈಕಿ ಬರುವ ಒಂದು–"ದುರ್ಧರ". ಧರಿಸಲು ಬಹಳ ಅಶಕ್ಯ. ಸಿದ್ಧತೆ ಮಾಡಿಕೊಳ್ಳುವುದೇ ಸ್ವಭಾವವಾಗುವಾಗ ಅದು ಅಧ್ಯಾತ್ಮ. ಜೀವಾತ್ಮನಾಗುವುದೇ ಒಂದು ಎಲಿಜಿಬಿಲಿಟಿ. ಅಲ್ಲಿಂದ ಪ್ರವೇಶ. ಪರಮಾತ್ಮ ಸಂಬಂಧಿ ವ್ಯವಹಾರಗಳು. ಜೀವೋತ್ತಮನಾಗುವ ಪ್ರಯತ್ನ.

ವಾಲ್ಮೀಕಿ ವಿಶ್ವಾಮಿತ್ರಾದಿಗಳು ತಾಪತ್ರಯಾದಿಗಳಿಂದ ಸಾಮಾಜಿಕವಾಗಿ, ವ್ಯಾವಹಾರಿಕವಾಗಿ ಬೇಯುತ್ತಿರುವಾಗ ಪರಮವ್ಯೋಮದಲ್ಲಿದ್ದ ಶ್ರೀರಾಮನಾಮವು ಅವತರಣಗೊಂಡಿತು. ಅದನ್ನು ಕೀರ್ತಿಸುವಾಗ ಕೌಸಲ್ಯೆಯ ಗರ್ಭಾಂಬುದಿಯಲ್ಲಿ ಮೂರ್ತಿಯ ಉದಯವಾಯಿತು.

ಬರೆ ನಾಮಸ್ಮರಣೆ ಮಾಡಲು ನಮಗೆ ಬಂದ ಸಂಕಟಗಳು ಏನು?(ಅಜ್ಜ ಆಗಾಗ ಕೇಳುತ್ತಿದ್ದರು). ಚಿಂತೆ ಅಲ್ಲಿಂದ ಚಿಂತನೆ. ರಾಮ ರಾಮ ಎಂದರೆ ಸಾಲದು. ಅದು ಹೀಗಾಗುತ್ತದೆ– ತಲೆನೋವಿನಂತಹ ಕ್ಷುಲ್ಲಕ ಬಾಧೆಗೆ ಹೃದಯತಜ್ಞರಲ್ಲಿ ಹೋದರೆ ಅವರ ಅಮೂಲ್ಯ ಗಂಟೆಗಳನ್ನು ಕೊಂದ ಪಾಪ ಬರುತ್ತದೆ. ಅದಕ್ಕಾಗಿ ಪೂಜ್ಯ ಅಜ್ಜನವರು ಎನ್ನುತ್ತಿದ್ದುದು ವಿಕಾಸ! ವಿಕಾಸ!...... ಧರ್ಮಾಚರಣೆಯ ಲಕ್ಷಣಗಳತ್ತ ಗುರಿ.

ಪ್ರಯತ್ನ , ಅಹಿಂಸೆ, ಅಪರಿಗ್ರಹ... ಇತ್ಯಾದಿ. ನಾವು ಇದ್ದು ಜಯಿಸಬೇಕು.

ಋಕ್ಸಂಹಿತೆಯ ಪೂರ್ಣಸಾಕಾರ ಈ ರಬ್ಬಿ ದೇವರು. ಆದ್ದರಿಂದ ಪ್ರಜ್ಞಾನ ಘನ. ಅಗ್ನಿಯೇ ರಾಜಕೀಯ ಅರ್ಥಶಾಸ್ತ್ರ. ಕಲ್ಯಾಣರಾಜ್ಯ ಹೇಳುವುದೂ ಅಗ್ನಿಯ ಕುರಿತಾಗಿಯೇ. ಇದರ ನಾಮ ಮಾತ್ರ ಗುಟ್ಟು. ವಸ್ತುವಿನಲ್ಲಿನ ಪುರುಷಾರ್ಥವೇ ಅಗ್ನಿ ಎಂದಾಗುವಾಗ ಸಾವಯವವನ್ನು ಆಧರಿಸಿ ಬರುವುದು ಮತ್ತು ಮುಟ್ಟಲಾಗದ್ದು ಮಾತ್ರ ಅಗ್ನಿಯಲ್ಲ. ಬರೆ ಕಟ್ಟಿಗೆಯನ್ನು ಆಧರಿಸಿ ಬರುವುದು – ಎನ್ನುವುದುಪರಮ ಅಜ್ಞಾನ. ಆಜ್ಯಾಹುತಿಯನ್ನು ಸ್ವೀಕರಿಸಲು ವೇದಿಕೆಯನ್ನು ಏರುವಲ್ಲಿ ಪೂರ್ವಾಪರ ಸಿದ್ಧತೆಯ ಋಷಿಯ ಅಗತ್ಯವಿದೆ. ಇಲ್ಲದಿದ್ದರೆ ಎಲ್ಲವೂ ವ್ಯರ್ಥ.

ಅವರ ಅಗ್ನಿ ಹೀಗೆ ಓಡುತ್ತದೆ. ಭಿಕ್ಷಾಟನೆಯಿಂದ ಶಿಷ್ಯರು ತಂದ ಕುಶ, ಸಮಿಧೆ, ಘೃತ, ಇಧ್ಮಾದಿಗಲು ಈ ಅಗ್ನಿಯನ್ನು ಸಮರ್ಪಕವಾಗಿ ಸ್ವಾಗತಿಸುತ್ತವೆ. ಇದು ಕಲ್ಯಾಣಾರ್ಥವಾದ ಯಜ್ಞ.

ಆಹ್ವಾನಿಸುವ ಪ್ರತಿಭಾವಂತನನ್ನು ಹೊಂದಿ ಫಲ. ಅವನು ಮಾತ್ರ ಕಲ್ಯಾಣದ ಕಿಇರನಗಳನ್ನು ಭೂಮಿಗೆ ತರಲು ಶಕ್ತನಾಗುತ್ತಾನ್ಸೆ. ಇದು ಅಗ್ನಿಯ ಸಂಸ್ಕರಣ.

ವಾಕ್, ಕಲ್ಲು ,ನೀರು, ಭೂಮಿ, ಋತ, ಅನ್ನ, ವನಸ್ಪತಿಗಳು ಮತ್ತೆ ಪುನಃ ಪುತ್ರನೂ ಅಗ್ನಿಯೇ. ತಂದೆ ತಾಯಿಯರು ಪೂರ್ವೋತ್ತರ. ಕುಟುಂಬ ಮೊದಲ್ಗೊಂಡು ಆಗುವ ವಿಕಾಸವೇ ಜಗತ್ಕಲ್ಯಾಣಕ್ಕೆ ಹೇತು.

ಈ ಸತ್ಪುತ್ರನು ಪಥ ತಪ್ಪಿದ ಆದಿತ್ಯನನ್ನು ಸ್ವಸ್ಥಾನಕ್ಕೆ ತಂದಾನು.(ಮಹಾತ್ಮರ ಅಂತಿಮ ಸಂದೇಶ) ಆದರೆ ನಮ್ಮ ಈಗಿನ ಯಜ್ಞಯಾಗಾದಿಗಳು, ಉಪಾಸನೆಗಳ ಸ್ಥಿತಿ?

ಓಂಕಾರ ಮೊಳಗುತ್ತದೆ. ಪುನಃ ನಿಲ್ಲಿಸಿ ಮತ್ತೆ, ಹೀಗೆ ನಿರಂತರ. ಆದರೆ ಒಂದು ಓಂಕಾರದಿಂದ (ನಿರ್ದಿಷ್ಟ ಮಾತ್ರೆಗಳ) ಮತ್ತೊಂದನ್ನು ಆರಂಭಿಸುವ ಮಧ್ಯೆ? ಮತ್ತು ಆರಂಭಿಸುವ ಅಗತ್ಯ? ಮಧ್ಯದ ಖಾಲಿ ಸ್ಥಳವೇ

ದುರ್ಗಮ , ದುರ್ಲಭ! ಅದೇ ತುರೀಯ. ಓಂಕಾರದ ನಂತರದ ಮೌನವೇ ಕಲ್ಯಾಣಕಾರಕವಾದದ್ದು, ಅದನ್ನು ಧರಿಸುವುದೇ ಉದ್ದೇಶ. ಅಲ್ಲಿ ಪೂಜ್ಯರು ನಮಗೆ ಸಿಗುತ್ತಾರೆ. ಮತ್ತು ಅಲ್ಲಿ ಅವರು ಇರುತಾರೆ.

ವ್ಯಕ್ತಿಯಿಂದ ಸ್ರಷ್ಟಿ ಎನ್ನುವುದು ಸನಾತನ ಧರ್ಮ ಮಾತ್ರ. ಆರಂಭವೆಲ್ಲವೂ ಶರೀರದಿಂದಲೇ. ಅದರ ಸೂಕ್ಷ್ಮ ಪ್ರದೇಶವನ್ನು ಹುಡುಕುವುದೇ ಬ್ರಹ್ಮವಿದ್ಯೆ.
ಅಲ್ಲಿ ದೇಶದ ರಕ್ಷಣೆಗಾಗಿ ಮಹಾಯೋಧ ಗಡಿಗಳಲ್ಲಿ ಸದಾ ಎಚ್ಚರಿರುವಂತೆ ಇಲ್ಲಿ ಏಕಮೇವಾದ್ವಿತೀಯನು ವಿರಾಜಮಾನನಾಗಿರುತ್ತಾನೆ. ನಮ್ಮಲ್ಲಿ ಎಷ್ಟೊಂದು ಪ್ರೀತಿ ಅವನಿಗೆ. ಆದರೆ ನಿರಂತರ ಹುಡುಕಾಟ ಅಗತ್ಯ. ಅವರೇ ಶರೀರದ ಒಳಿತಿನ ಬಗ್ಗೆ ಕತ್ತಲೆಯಿಂದ ನಮ್ಮನ್ನು ಉದ್ಧರಿಸುವ ಬಗೆಗೆ ಸದಾ ಕಾತರಿಸುತ್ತಿರುವ ರಬ್ಬಿ ನಿತ್ಯಾನಂದ ಅಜ್ಜನವರು.
ಭೂಮಿಯ ಗುಹೆಗಳಲ್ಲಿ, ತೀರ್ಥಗಳಲ್ಲಿ ಕ್ಷೇತ್ರಗಲ್ಲಿ ಯಾರಿದ್ದಾರೆ? ಅವರು ಬರೇ ಸಾಧನಗಳು ಮಾತ್ರ. ಸಾಧಿಸಲ್ಪಡಬೇಕಾದುದು ಶರೀರದ ಒಳಗೇ ಇದೆ.